# ಉಪತಹಶೀಲ್ದಾರವರ ನ್ಯಾಯಾಲಯ, ಕೋಗಳಿ, ಹ.ಬೊ.ಹಳ್ಳಿ ತಾಲೂಕು.

ಸಂ/ಕಂ/ಪಹಣಿ/ವಿವಾದ/89/2015-16 ದಿನಾಂಕ:03.05.2016

ಉಪಸ್ಥಿತರು:-ವಿ.ಹೆಚ್.ಮಲ್ಲಿಕಾರ್ಜುನ,
ಉಪ ತಹಶೀಲ್ದಾರರು,
ನಾಡ ಕಾರ್ಯಾಲಯ, ಕೋಗಳಿ

| ಅರ್ಜಿದಾರರು | ತಕರಾರುದಾರರು |
|---|---|
| ಎಂ.ಜಿ.ಚನ್ನವೀರಮ್ಮ ಗಂಡ ಲೇಟ್ ಗೌಡಜ್ಜ<br>ಗ್ರಾಮ:-ಹರೇಗೊಂಡನಹಳ್ಳಿ ತಾ:-ಹೆಚ್.ಬಿ.ಹಳ್ಳಿ | ಎಂ.ಜಿ.ಪಂಚಾಕ್ಷರಿಗೌಡ ತಂದೆ ಲೇಟ್ ಗೌಡಜ್ಜ<br>ಗ್ರಾಮ:-ಹರೇಗೊಂಡನಹಳ್ಳಿ ತಾ:-ಹೆಚ್.ಬಿ.ಹಳ್ಳಿ |

**ವಿವಾದಿತ ಜಮೀನಿನ ವಿವರ:**

| ಕ್ರ.ಸಂ. | ತಾಲೂಕು | ಗ್ರಾಮದ ಹೆಸರು | ಸ.ನಂ. | ವಿಸ್ತೀರ್ಣ(ಎಕರೆಗಳಲ್ಲಿ) | ತರಹೆ |
|---|---|---|---|---|---|
| 1. | ಹಗರಿಬೊಮ್ಮನಹಳ್ಳಿ | ಹರೇಗೊಂಡನಹಳ್ಳಿ | 84/6 | 2-72 | ಖುಷ್ಕಿ |
| 2. | ಹಗರಿಬೊಮ್ಮನಹಳ್ಳಿ | ಹರೇಗೊಂಡನಹಳ್ಳಿ | 139 | 3-00 | ಖುಷ್ಕಿ |
| 3. | ಹಗರಿಬೊಮ್ಮನಹಳ್ಳಿ | ಹರೇಗೊಂಡನಹಳ್ಳಿ | 156/1 | 0-91 | ಖುಷ್ಕಿ |

**ಪೀಠಿಕೆ:-**

ಬಳ್ಳಾರಿ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲೂಕಿನ ಹರೇಗೊಂಡನಹಳ್ಳಿ ಗ್ರಾಮದ ವಿವಾದಿತ ಜಮೀನಿಗೆ ಸಂಬಂಧಿಸಿದಂತೆ, ಬಳ್ಳಾರಿ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲೂಕಿನ ಹರೇಗೊಂಡನಹಳ್ಳಿ ಗ್ರಾಮದ ನಿವಾಸಿಯಾದ ಎಂ.ಜಿ.ಚನ್ನವೀರಮ್ಮ ಗಂಡ ಲೇಟ್ ಗೌಡಜ್ಜ ಇವರುಪೌತಿ ವಾರಸು ಪ್ರಕಾರ ಹಕ್ಕುಬದಲಾವಣೆಯನ್ನು ಮಾಡಲು ದಿನಾಂಕ:09.12.2015 ಅರ್ಜಿಯನ್ನು ಸಲ್ಲಿಸಿರುತ್ತಾರೆ. ಗ್ರಾಮದಲ್ಲಿ ನಮೂನೆ-21 ರ ನೋಟೀಸನ್ನು ದಿನಾಂಕ:15.12.2015 ರಂದು ಜಾರಿಮಾಡಲಾಗಿ, ನಿಗದಿತ ಅವಧಿಯೊಳಗೆ ಅಂದರೆ ದಿನಾಂಕ:17.12.2015 ರಂದು ಎಂ.ಜಿ.ಪಂಚಾಕ್ಷರಿಗೌಡ ತಂದೆ ಲೇಟ್ ಗೌಡಜ್ಜ ಇವರು ತಕರಾರು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಕಾರಣ, ಎಂ.ಆರ್.ನಂ.19/15-16 ರ ಕಡತವು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಕಂದಾಯ ನಿರೀಕ್ಷಕರು, ಕೋಗಳಿ ಇವರು ಈ ಕಾರ್ಯಾಲಯಕ್ಕೆ ವರದಿಸಲ್ಲಿಸಿರುತ್ತಾರೆ. ಉಭಯ ಪಕ್ಷಕಾರರಿಗೆ ದಿ:04.03.2016ಕ್ಕೆ ವಿಚಾರಣೆಗೆ ಹಾಜರಾಗಲು ನೋಟೀಸನ್ನು ಜಾರಿ ಮಾಡಲಾಯಿತು.

ಪ್ರಕರಣವನ್ನು ದಿನಾಂಕ:04.03.2016ರಿಂದ 03.05.2016 ರವರೆಗೆ ವಿಚಾರಣೆಯನ್ನು ಮಾಡಲಾಯಿತು. ಉಭಯ ಪಕ್ಷಕಾರರು ಹಾಜರಾಗಿರುತ್ತಾರೆ. ಅರ್ಜಿದಾರರು ಹಾಜರಾಗಿ ಹೇಳುವಂತೆ, ಸದರಿ ಜಮೀನು ನನ್ನ ಗಂಡನ ಜಮೀನಾಗಿದ್ದು, ಪೌತಿ ವಾರಸು ಪ್ರಕಾರ ನನ್ನ ಹೆಸರಿಗೆ ಹಕ್ಕುಬದಲಾವಣೆ ಮಾಡಲು ಮೌಖಿಕವಾಗಿ ಹೇಳಿಕೆಯನ್ನು ನೀಡಿರುತ್ತಾರೆ.

ತಕರಾರುದಾರರು ಹಾಜರಾಗಿ ಹೇಳುವಂತೆ; ಸದರಿ ಪ್ರಕರಣದಲ್ಲಿ ನನ್ನ ತಾಯಿಯವರಾದ ಶ್ರೀಮತಿ ಚನ್ನವೀರಮ್ಮ ಗಂಡ ಲೇಟ್ ಗೌಡಜ್ಜ ಇವರಿಗೆ ಸುಮಾರು 80 ವರ್ಷ ವಯಸ್ಸಾಗಿರುತ್ತದೆ

-ಇವರು ಮುಗ್ಧರಿದ್ದು, ಅವರಿಗೆ ಪ್ರಾಪಂಚಿಕ ವ್ಯವಾರಿಕ ಜ್ಞಾನ ಇರುವುದಿಲ್ಲ ಕಾರಣ, ಇವ-- ಲಾಭ ಪಡೆದುಕೊಂಡು ನನ್ನ ತಮ್ಮಂದಿರು ಯಾರಾದರೂ ಅವರ ಹತ್ತಿರ ಸಹಿ ಮಾಡಿಸಿಕೊಂಡು ಆಸ್ತಿಯನ್ನು ಬೇರೆ ಯಾರಿಗಾದರೂ ಪರಭಾರೆ ಮಾಡುವ ಅವಕಾಶ ಇರುತ್ತದೆ. ಅದ್ದರಿಂದ ದಯಾಳುಗಳಾದ ತಾವುಗಳು ಈ ಬಗ್ಗೆ ಪರಿಶೀಲಿಸಿ ಸದರಿ ಮುಟೇಷನ್ ಮಾಡುವುದನ್ನು ಇಲ್ಲಿಗೆ ತಡೆಯುವುದು ತುಂಬಾ ಮುಖ್ಯವಾಗಿರುತ್ತದೆ. ಮುಂದುವರೆದು, ಅರ್ಜಿದಾರರಾದ ನನ್ನ ತಾಯಿ ಶ್ರೀಮತಿ ಚನ್ನವೀರಮ್ಮ ಗಂಡ ಲೇಟ್ ಗೌಡಜ್ಜ ಇವರಿಗೆ ಅವರ ತಾಯಿ ಹೆಚ್.ಕೊಟ್ರಬಸಮ್ಮ ಇವರಿಂದ ತವರುಮನೆಯ ಆಸ್ತಿ ಬಂದಿರುತ್ತದೆ. ಎಂದು ಲಿಖಿತವಾಗಿ ಹೇಳಿಕೆಯನ್ನು ನೀಡಿರುತ್ತಾರೆ.

ಮುಂದುವರೆದು, ತಕರಾರುದಾರರು ಹಾಜರಾಗಿ ಹೇಳುವಂತೆ; ಸದರಿ ಜಮೀನುಗಳು ವಾರಸು ಪ್ರಕಾರ ನನ್ನ ತಾಯಿಯವರು ಅಂದರೆ ಅರ್ಜಿದಾರರ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ನನ್ನ ಯಾವುದೇ ತಂಟೆ, ತಕರಾರು ಇರುವುದಿಲ್ಲ ಎಂದು ಮೌಖಿಕವಾಗಿ ಹೇಳಿಕೆಯನ್ನು ನೀಡಿರುತ್ತಾರೆ.

ಸದರಿ ಪ್ರಕರಣದಲ್ಲಿ ಅರ್ಜಿದಾರರು ಮತ್ತು ತಕರಾರುದಾರರು ನೀಡಿದ ಹೇಳಿಕೆ ಮತ್ತು ದಾಖಲೆಗಳನ್ನು ಪರಿಶೀಲನೆಮಾಡಲಾಗಿ, ಅರ್ಜಿದಾರರ ಹೆಸರಿಗೆ ಪೌತಿ ವಾರಸು ಪ್ರಕಾರ ಹಕ್ಕುಬದಲಾವಣೆ ಮಾಡಲು ಈ ಕೆಳಕಂಡಂತೆ ಆದೇಶ;

## -:ಆದೇಶ:-

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ, ವಾಸ್ತವಾಂಶ, ಹಿನ್ನಲೆಮತ್ತು ಕಾರಣಗಳ ಆಧಾರದ ಮೇಲೆ ಎಂ.ಆರ್.ನಂ.19/2015-16 ರ ಪ್ರಕಾರ, ಪ್ರಕರಣದಲ್ಲಿ ಹರೇಗೊಂಡನಹಳ್ಳಿ ಗ್ರಾಮದ ಸ.ನಂ.84/6 ವಿಸ್ತೀರ್ಣ 2-72, ಸ.ನಂ.139 ವಿಸ್ತೀರ್ಣ 3-00, ಸ.ನಂ.156/1 ವಿಸ್ತೀರ್ಣ 0-91 ಎಕರೆ ಜಮೀನಿಗೆ ಅರ್ಜಿದಾರರಾದ ಎಂ.ಜಿ.ಚನ್ನವೀರಮ್ಮ ಗಂಡ ಲೇಟ್ ಗೌಡಜ್ಜ ಇವರ ಹೆಸರಿಗೆ ಪೌತಿ ವಾರಸುಪ್ರಕಾರ ಹಕ್ಕುಬದಲಾವಣೆ ಮಾಡಲು ಆದೇಶಿಸಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀಕರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ, ಈ ದಿನ ದಿನಾಂಕ:03.05.2016 ರಂದು ತೆರದ ನ್ಯಾಯಾಲಯದಲ್ಲಿ ಘೋಷಿಸಿದೆ.

[ವಿ.ಹೆಚ್.ಮಲ್ಲಿಕಾರ್ಜುನ] 3/5/16

ಉಪ ತಹಶೀಲ್ದಾರರು,

ನಾಡ ಕಾರ್ಯಾಲಯ, ಕೋಗಳಿ

ಉಪ ತಹಸೀಲ್ದಾರ್, ನಾಡ ಕಛೇರಿ, ಕೋಗಳಿ.

ಪ್ರತಿಯನ್ನು:-

1. ಅರ್ಜಿದಾರರು ಮತ್ತು ತಕರಾರುದಾರರಿಗೆ.
2. ಭೂಮಿ ಕೇಂದ್ರ, ತಾಲೂಕು ಕಛೇರಿ, ಹಗರಿಬೊಮ್ಮನಹಳ್ಳಿ ಇವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
3. ಕಂದಾಯ ನಿರೀಕ್ಷಕರು, ಕೋಗಳಿ.
4. ಶುದ್ಧ ಪ್ರತಿ ಕಡತಕ್ಕೆ.